ಕಲಾಪ ಮಾಡುವ ವೇಳೆಗೆ ನಾವು ಪ್ರತಿಭಟನೆ ಮಾಡುವ ವೇಳೆಗೆ ನಾವು ಆಡುವ ಮಾತುಗಳು, ನಡೆಸುವಂತಹ ಕೆಲಸಗಳು ಸಭೆಯ ಘನತೆಯನ್ನು ಇನ್ನಷ್ಟು ಹೆಚ್ಚಿಸುವಂತೆ ಆಗಬೇಕು ಎನ್ನುವುದಷ್ಟೇ ನನ್ನ ಆಸೆ. ಇದನ್ನು ಇಲ್ಲಿಗೇ ಮುಕ್ತಾಯ ಮಾಡೋಣ. ಮಾನ್ಯ ಲಿಂಗಪ್ಪನವರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ : ದಯಮಾಡಿ ತಾವು ಏನು ನಿರ್ಣಯ ಕೊಟ್ಟಿದ್ದೀರಿ ಇದನ್ನು ಹಿಂದಕ್ಕೆ ಪಡೆದುಕೊಂಡರೆ ಚೆನ್ನಾಗಿರುತ್ತದೆ.

ಶ್ರೀ ಸಿ ಎಂ ಲಿಂಗಪ್ಪ : ಅಧ್ಯಕ್ಷರೇ, ತಾವು ಕೊಟ್ಟ ನಿರ್ಣಯಕ್ಕೆ ವಿರುದ್ಧವಾಗಿ ಹೋಗುವ ಮನವರಿಕೆ ನನ್ನಲ್ಲಿಲ್ಲ. ಒಂದೇ ಒಂದು ವಿಚಾರ: ಶ್ರೀ ವಾಟಾಳ್ ನಾಗರಾಜ್ ಆಗಲಿ ಇನ್ಯಾರೇ ಸದಸ್ಯರಾಗಲಿ ಗವರ್ನರ್ ಭಾಷಣ ಆಗುತ್ತಿದ್ದಾಗ ರೂಲು 27 ಕ್ಕೆ ಬದ್ಧರಾಗಬೇಕಾಗುತ್ತದೆ. ಹಿಶ್ಮಿಯವರು ಕೂಡ ರೂಲ್ 27 ಕ್ಕೆ ಬದ್ಧರಾಗಬೇಕಾಗುತ್ತದೆ. ಇದನ್ನು ಅವರು ಖಂಡಿತ ಮನಸಿನಲ್ಲಿಟ್ಟುಕೊಂಡಿರುತ್ತಾರೆ ಎಂಬ ಆಶಾಭಾವನೆಯನ್ನು ವ್ಯಕ್ತಪಡಿಸಿ ತಮ್ಮ ಸ್ಪಷ್ಟೀಕರಣಕ್ಕೆ ವಂದಿಸಿ ನಾನು ತಮಗೆ ಕೊಟ್ಟಿದ್ದ ಹಕ್ಕುಚ್ಯುತಿ ಸೂಚನೆಯನ್ನು ಹಿಂದಕ್ಕೆ ಪಡೆಯುತ್ತಿದ್ದೇನೆ.

ಅಧ್ಯಕ್ಷರು : ಧನ್ಯವಾದಗಳು.

ಶ್ರೀ ಎನ್. ರಾಜಣ್ಣ : ನಾನೂ ಐದು ವರ್ಷದಿಂದ ನೋಡಿಕೊಂಡು ಬಂದಿದ್ದೇನೆ. ರಾಜ್ಯದಲ್ಲಿ ಮೊದಲಿಗರಾದ ರಾಜ್ಯಪಾಲರ ಭಾಷಣಕ್ಕೆ ಇನ್ನೂ ಮುಂದೆ ಆಡಚಣೆ ಮಾಡುವುದಿಲ್ಲ ಎಂದು ಹೇಳಲಿ, ಸಾಕು ಅಷ್ಟೇ.

ಅಧ್ಯಕ್ಷರು : ನೋಡೋಣ ಆಗ ಗವರ್ನರ್ ಯಾರಿರುತ್ತಾರೋ ಸ್ಪೀಕರ್ ಯಾರಿರುತ್ತಾರೋ ಅವರ ಹಣೆಬರಹ.

ಶ್ರೀ ಎನ್ ರಾಜಣ್ಣ : ಗೌರವಾನ್ವಿತ ಸದಸ್ಯರು ಈವತ್ತು ಏತಕ್ಕೆ ಬರುತ್ತಿಲ್ಲ ಎಂದು ಅವರು ಹೇಳುತ್ತಿದ್ದರು. He is the Head of the State, we have to honour, we have to respect our Hon'ble Governor. Discipline is important.

ವಿಷಯ (ಅ) ಕರ್ನಾಟಕ ಪಂಚಾಯತ್ ರಾಜ್ ವಿಧೇಯಕವನ್ನು ಚರ್ಚೆಗೆ ತೆಗೆದುಕೊಳ್ಳುವ ಬಗ್ಗೆ

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಕರ್ನಾಟಕ ಪಂಚಾಯತ್ ರಾಜ್ ಕಾನೂನು ಅಧ್ಯಾದ್ಯಾಪನವನ್ನು ರಿಪ್ಲೇಸ್ ಮಾಡಿ ನಾವು ಆಕ್ಟ್ ತರಬೇಕಾಗುತ್ತದೆ ಮತ್ತು ಮೇಲ್ಮನೆಗೂ ಇದನ್ನು ತೆಗೆದುಕೊಂಡು ಹೋಗಬೇಕಾಗಿರುವುದರಿಂದ ದಯವಿಟ್ಟು ತಾವು ಆದ್ಯತೆ ಮೇಲೆ ತೆಗೆದುಕೊಳ್ಳಬೇಕೆಂದು ಪ್ರಾರ್ಥನೆ.

ಶ್ರೀಮಲ್ಲಿಕಾರ್ಜುನ ಖರ್ಗೆ : ಆಗುವುದಿಲ್ಲ ಸಾರ್. ಅದರ ಮೇಲೆ ಸುಮಾರು ಎರಡು ತಾಸಾದರೂ ಚರ್ಚೆಯಾಗಬೇಕು. ತಮಗೆ ಗೊತ್ತಿದೆ. ಘೋರ್ಪಡೆ ಮಾತನಾಡುತ್ತಾರೆ. ಮೊಯ್ಲಿ ಇದ್ದಾರೆ, ನಿನ್ನೆ ಹೇಳಿದೆ. ಸುಮಾರು 15ಜನ ಆ ಬಿಲ್ ಮೇಲೆ ಮಾತನಾಡುವವರಿದ್ದಾರೆ. ಆದ್ದರಿಂದ ಅದರ ಚರ್ಚೆಯನ್ನು ಮೊಟಕುಗೊಳಿಸುವುದೂ ಸಾಧುವಲ್ಲ. ಏಕೆಂದರೆ ಎಲ್ಲಾ ಸದಸ್ಯರೂ ತಯಾರಿ ಮಾಡಿಕೊಂಡು ಬಂದಿದ್ದಾರೆ.

ಅಧ್ಯಕ್ಷರು : ಹೀಗೆ ಮಾಡೋಣ, ನಿಯಮ, 69ರ ಕೆಳಗೆ ಬೈವಾಟರ್ ಮೊದಲು ತೆಗೆದುಕೊಂಡು ಅದನ್ನು ಮುಗಿಸಿ ಆಮೇಲೆ ಅದನ್ನು ತೆಗೆದುಕೊಂಡು ಆಮೇಲೆ ಸಿಎಂ ಅವರ ಉತ್ತರ ತೆಗೆದುಕೊಳ್ಳೋಣ. ಈಗ ವಿವಾದವಲ್ಲದ ಬಿಲ್‌ಗಳನ್ನು ತೆಗೆದುಕೊಳ್ಳೋಣ.

ವಿಷಯ : (ಅ) ಕರ್ನಾಟಕ ಗೃಹ ಮಂಡಳಿ ವಿಧೇಯಕದ ಬಗ್ಗೆ

ಶ್ರೀ ಎಂ ಪಿ ಪ್ರಕಾಶ್ : ಹೌಸಿಂಗ್ ಬೋರ್ಡ್ ಬಿಲ್ ತೆಗೆದುಕೊಳ್ಳೋಣ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಏಕೆ ಸಚಿವರು ಎಲ್ಲಿ ಹೋಗಿದ್ದಾರೆ.?

ಶ್ರೀ ಎಂ ಪಿ ಪ್ರಕಾಶ್ : ಇಲ್ಲ, ಬೇರೆ ಕೆಲಸದ ಮೇಲೆ ಅವರು ಹೋಗಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನೀವು ಏನು ಹೇಳಿದ್ದಿರಿ, ಅವರ ಸಬ್ಜೆಕ್ಟ್ ಇದ್ದಾಗ ಅವರು ಬರಲಿಲ್ಲ ಅಂದರೆ ನನಗೆ ಕೇಳುವ ಹಕ್ಕಿದೆ. ಕೇಳುತ್ತೇನೆ. ಈಗ ಗೃಹಮಂಡಲೀದು ಬಂದಿದೆ, ಹೌಸಿಂಗ್ ಮಿನಿಸ್ಟರ್ ಎಲ್ಲಿ ?

ಶ್ರೀ ಎಂ ಪಿ ಪ್ರಕಾಶ್ : ಇದು ಬಹಳ ಸಿಂಪಾಲ್ಲಾಗಿರುವ ಬಿಲ್, ಸಚಿವರು ಬೇರೆ ಏನೋ ಕಾರ್ಯನಿಮಿತ್ತವಾಗಿ ಹೋಗಿದ್ದಾರೆ.

ಅಧ್ಯಕ್ಷರು : ಪ್ರಕಾಶರವರೇ ಅವರು ಕೇಳುತ್ತಾರೆ ಎಂದು ಔಪಚಾರಿಕವಾಗಿ ನಾವು ಹೇಳೋದಲ್ಲ ಮುಖ್ಯಮಂತ್ರಿಗಳು ಅನೇಕ ಪೋರಂಗಳಲ್ಲಿ ಅನೇಕ ಸಲ ಹೇಳಿದ್ದಾರೆ. ಪೊಲಿಟಿಕಲ್ ಎಕ್ಸಾಪಿಡೆಯೆನ್ಸಿಗೆ ಏನೇನೆಲ್ಲಾ ಮಾಡುತ್ತಿದ್ದೇವೆ ಎಂದು ನಾವು ಸಂಸದೀಯ ನಡವಳಿಕೆಗಳಿಗಿರುವ ಘನತೆಯನ್ನೇ ತಗ್ಗಿಸಿಬಿಡುತ್ತಿದ್ದೇವೆ. that is where I am pained, After all, you know the history. For a period of seven centuries, this struggle went on in Great Britain and ultimately to land up here into this stage. It is almost 7-8 centuries, ನೋಡಿ, ಅವರ ಬಿಲ್ ಬರುತ್ತದೆ ಅವರು ಇರುವುದಿಲ್ಲ. ನಮಗೂ ಹೇಳುವುದಿಲ್ಲ.

ಶ್ರೀಮಲ್ಲಿಕಾರ್ಜುನ ಖರ್ಗೆ : ಆದರೂ ನೀವು ಅವರಿಗೆ ಚೀಮಾರಿ ಹಾಕುವುದಿಲ್ಲ, ನೋಡೋಣ ಕಡೇ ದಿವಸ ಇವತ್ತು, ಹಾಕಿ, ಒಂದು ಸಾರಿ ಹಾಕಿ ಸಾರ್ ನೋಡೋಣ.

ಅಧ್ಯಕ್ಷರು: ಊಟ ಮಾಡಿ ಬಂದು ಹಾಕುತ್ತೇನೆ, ಸುಮ್ಮನಿರಿ.

7. ಶಾಸನ ರಚನಾ ಕಾರ್ಯಕಲಾಪಗಳು

ಪರ್ಯಾಲೋಚನಾ ಪ್ರಸ್ತಾವ

(ಅ) ಮೈಸೂರು ತಂಬಾಕು ಕಂಪನಿ (ಷೇರುಗಳ ಆರ್ಜನೆ)ವಿಧೇಯಕ, 1998

ಶ್ರೀ ಸಿ ಬೈರೇಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು) : ಅಧ್ಯಕ್ಷರೇ ವಿಧಾನಪರಿಷತ್ತಿನಿಂದ ಅಂಗೀಕೃತ ರೂಪದಲ್ಲಿ 1998ರ ಮೈಸೂರು ತಂಬಾಕು ಕಂಪೆನಿ (ಷೇರುಗಳ ಆರ್ಜನೆ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವ ಮಂಡಿಸಲ್ಪಟ್ಟಿತು